# ಸಂಕಲನಾತ್ಮಕ ಮೌಲ್ಯಮಾಪನ-2

## ವಾರ್ಷಿಕ ಪರೀಕ್ಷೆ ಪ್ರಶ್ನೆ ಪತ್ರಿಕೆ

**ವಿಷಯ:- ಸಮಾಜ ವಿಜ್ಞಾನ(೮೫K)** **ತರಗತಿ:- ೯ನೇ ತರಗತಿ**

---

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಿದ್ದು ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: 15x1=15**

1) ಏಸುಕ್ರಿಸ್ತರು ಜನಿಸಿದ ಸ್ಥಳ

ಎ) ಮೆಕ್ಕಾ ಬಿ) ಮದೀನಾ ಸಿ) ಬೆತ್ಲಹ್ಯಾಂ ಡಿ) ಗೋಲ್ ಗೋಥ

2) ಈ ಕೆಳಗಿನವುಗಳಲ್ಲಿ ಯಾವುದನ್ನು ಬ್ಯಾಂಕುಗಳ ಬ್ಯಾಂಕ್ ಎಂದು ಕರೆಯುತ್ತಾರೆ.

ಎ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬಿ) ರಿಸರ್ವ್ ಬ್ಯಾಂಕ್ ಸಿ) ವಿನಿಮಯ ಬ್ಯಾಂಕ್ ಡಿ) ಸಹಕಾರಿ ಬ್ಯಾಂಕ್

3) ಕರ್ನಾಟಕದ ಕಾಶ್ಮೀರವೆಂದು ------ ಜಿಲ್ಲೆಯನ್ನು ಕರೆಯುತ್ತಾರೆ.

ಎ) ಕೊಡಗು ಬಿ) ಚಿಕ್ಕಮಗಳೂರು ಸಿ) ಶಿವಮೊಗ್ಗ ಡಿ) ಮೈಸೂರು

4) ಸಮಾಜದ ಜೀವಕೋಶ ----- ಆಗಿದೆ.

ಎ) ಸಮಾಜ ಬಿ) ಶಾಲೆ ಸಿ) ಕುಟುಂಬ ಡಿ) ಧರ್ಮ

5) ಪ್ರಸ್ತುತ ಭಾರತದ ರಾಷ್ಟ್ರಪತಿ

ಎ) ನರೇಂದ್ರ ಮೋದಿ ಬಿ) ಪ್ರಣವ್ ಮುಖರ್ಜಿ ಸಿ) ಸೋನಿಯಾ ಗಾಂಧಿ ಡಿ) ಎಲ್.ಕೆ. ಅಡ್ವಾಣಿ

6) ಕರ್ನಾಟಕದ ಮ್ಯಾಂಚೆಸ್ಟರ್ ಎಂದು ಕರೆಯಲ್ಪಡುವ ನಗರ

ಎ) ದಾವಣಗೆರೆ ಬಿ) ಬೆಂಗಳೂರು ಸಿ) ಮೈಸೂರು ಡಿ) ಬಳ್ಳಾರಿ

7) ವಿಜಯ ನಗರ ಸಾಮ್ರಾಜ್ಯ ಸ್ಥಾಪನೆಯಾದ ವರ್ಷ

ಎ) ಕ್ರಿ.ಶ 1336 ಬಿ) ಕ್ರಿ.ಶ 1347 ಸಿ) ಕ್ರಿ.ಶ 1441 ಡಿ) ಕ್ರಿ.ಶ 1565

8) ಕರ್ನಾಟಕವನ್ನು ಚಿನ್ನದ ನಾಡು ಎಂದು ಕರೆಯುತ್ತಾರೆ. ಏಕೆಂದರೆ

ಎ) ಕರ್ನಾಟಕವು ದೇಶದಲ್ಲಿಯೇ ಅತಿ ಹೆಚ್ಚು ಚಿನ್ನವನ್ನು ಕೊಳ್ಳುತ್ತದೆ

ಬಿ) ಕರ್ನಾಟಕವು ದೇಶದಲ್ಲಿಯೇ ಅತಿ ಹೆಚ್ಚು ಚಿನ್ನವನ್ನು ಆಮದು ಮಾಡಿಕೊಳ್ಳುತ್ತದೆ.

ಸಿ) ಕರ್ನಾಟಕವು ದೇಶದಲ್ಲಿಯೇ ಅತಿ ಹೆಚ್ಚು ಚಿನ್ನವನ್ನು ರಫ್ತು ಮಾಡುತ್ತದೆ.

ಡಿ) ಕರ್ನಾಟಕವು ದೇಶದಲ್ಲಿಯೇ ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸುತ್ತದೆ.

9) ನಮ್ಮ ಮೂರು ಸೇನಾಪಡೆಗಳ ಸರ್ವೋಚ್ಚ ಪ್ರಧಾನ ದಂಡನಾಯಕ

ಎ) ರಕ್ಷಣಾ ಮಂತ್ರಿ ಬಿ) ಪ್ರಧಾನಮಂತ್ರಿ ಸಿ) ರಾಷ್ಟ್ರಪತಿ ಡಿ) ಜನರಲ್

10) ವಸ್ತುಗಳನ್ನು ಪೂರೈಸುವವರು ಕೊಳ್ಳುವವರಿಂದ ಸಾಲ ಪಡೆಯುತ್ತಾರೆ. ಇದುವೇ

ಎ) ವ್ಯಾಪಾರ ಸಾಲ ಬಿ) ಬ್ಯಾಂಕ್ ಉದ್ಧರಿ ಸಿ) ಗ್ರಾಹಕ ಮುಂಗಡ ಡಿ) ಕಂತುಗಳ ಮೂಲಕ ಸಾಲ

11) ಪ್ರಸಿದ್ಧ ಜೋಗ್ ಜಲಪಾತ ------- ನದಿಯಿಂದ ಸೃಷ್ಟಿಯಾಗಿದೆ.

ಎ) ನೇತ್ರಾವತಿ ಬಿ) ಶರಾವತಿ ಸಿ) ಕಾವೇರಿ ಡಿ) ಕಾಳಿ

12) "ಶಿಕ್ಷಣವು ಮಗುವಿನ ವ್ಯಕ್ತಿತ್ವದಲ್ಲಿ ಸರ್ವಾಂಗೀಣ ಅಭಿವೃದ್ಧಿಯನ್ನು ತರುತ್ತದೆ." ಎಂದವರು

ಎ) ಸ್ವಾಮಿ ವಿವೇಕಾನಂದ ಬಿ) ಅಂಬೇಡ್ಕರ್ ಸಿ) ಗಾಂಧೀಜಿ ಡಿ) ಜವಹರ್ ಲಾಲ್ ನೆಹರು

13) ರಿನೈಜಾನ್ಸ್ ಎಂದರೆ

ಎ)ಪುನರ್ ಜನ್ಮ ಬಿ) ಕ್ರಾಂತಿ ಸಿ) ಪ್ರಗತಿ ಡಿ) ಬದಲಾವಣೆ

14) ಸರಕುಗಳ ಉತ್ಪಾದನೆಯ ಜೊತೆಗೆ ವರ್ಗೀಕರಣ, ಗುರುತು ಹಾಕುವುದು ಮೊದಲಾದವುಗಳ ಮಿಶ್ರಣವೇ

ಎ) ಬೆಲೆ ಮಿಶ್ರಣ ಬಿ) ಉತ್ಪನ್ನ ಮಿಶ್ರಣ ಸಿ) ಪ್ರವರ್ತನ ಮಿಶ್ರಣ ಡಿ) ಸ್ಥಳ ಮಿಶ್ರಣ

15) ಮಾಂಟೆಸ್ಕ್ಯೂ ರಚಿಸಿದ ಪ್ರಸಿದ್ಧ ಕೃತಿ

ಎ) ಸೋಷಿಯಲ್ ಕಾಂಟ್ರ್ಯಾಕ್ಟ್ ಬಿ) ಸ್ಪಿರಿಟ್ ಆಫ್ ಲಾಸ್ ಸಿ) ಡೆಕಾಮೆರಾನ್ ಡಿ) ಡಿವೈನ್ ಕಾಮಿಡಿ

## II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ: 15x1=15

16) ಕರ್ನಾಟಕವನ್ನು ಶ್ರೀಗಂಧದ ನಾಡು ಎಂದು ಏಕೆ ಕರೆಯುತ್ತಾರೆ?

17) ಊಳಿಗಮಾನ್ಯ ಪದ್ಧತಿ ಎಂದರೇನು?

18) ಗುಲಾಮಿ ಸಂತತಿಯ ಸ್ಥಾಪಕ ಯಾರು?

19) ಕೈಗಾರಿಕೀಕರಣವು ಯಾವುದನ್ನು ಸೂಚಿಸುತ್ತದೆ?

20) ಸಂವಿಧಾನವನ್ನು ವ್ಯಾಖ್ಯಾನಿಸಿ.

21) ದಿನ್–ಇ–ಇಲಾಹಿ ಹೊಸ ಪಂಥ ಸ್ಥಾಪಿಸಿದ ಮೊಘಲ್ ದೊರೆ ಯಾರು?

22) ಜನಸಾಂದ್ರತೆಯನ್ನು ಅರ್ಥೈಸಿರಿ.

23) ಉತ್ತರ ಕರ್ನಾಟಕದಲ್ಲಿ ಯಾವ ಪ್ರಕಾರದ ಮಣ್ಣು ಹೆಚ್ಚಾಗಿ ಕಂಡು ಬರುತ್ತದೆ?

24) ಕಾರವಾರದ ಬಳಿ ಇರುವ ನೌಕಾ ನೆಲೆಯನ್ನು ಏನೆಂದು ಕರೆಯಲಾಗುತ್ತದೆ?

25) ಶಂಕರಾಚಾರ್ಯರು ಪ್ರತಿಪಾದಿಸಿದ ಸಿದ್ಧಾಂತ ಯಾವುದು?

26) ಬಾಲ ಕಾರ್ಮಿಕ ಎಂದರೆ ಯಾರು?

27) ಸಾಮಾಜೀಕರಣ ಎಂದರೇನು?

28) ಊಳಿಗಮಾನ್ಯ ಪದ್ಧತಿಯಲ್ಲಿ ಹಿಡುವಳಿದಾರ ಹೊಂದಿದ್ದ ಭೂಮಿಯನ್ನು ಏನೆಂದು ಕರೆಯುತ್ತಿದ್ದರು?

29) ಪ್ರಸ್ತುತ ಕರ್ನಾಟಕದ ಮುಖ್ಯಮಂತ್ರಿ ಯಾರು?

30) ಲೆಕ್ಕ ಬರಹದಲ್ಲಿ ಕಚ್ಚಾ ಪುಸ್ತಕವೆಂದು ಯಾವುದನ್ನು ಕರೆಯುತ್ತೇವೆ?

## III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ: 17x2=34

31) ಕರ್ನಾಟಕದ ನಾಲ್ಕು ಆಡಳಿತ ವಿಭಾಗಗಳಾವುವು?

32) ಏಸುಕ್ರಿಸ್ತನ ಬೋಧನೆಗಳು ಅತ್ಯಂತ ಸರಳ ಮತ್ತು ಸುಲಭವಾಗಿ ಅನುಸರಿಸಬಲ್ಲವಾಗಿದ್ದವು ಎಂದು ಹೇಗೆ ಹೇಳುವಿರಿ.

33) ಭಕ್ತಿ ಪಂಥದ ಪರಿಣಾಮಗಳನ್ನು ವಿವರಿಸಿ.

34) ಜನತಾ ನ್ಯಾಯಾಲಯಗಳು ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ಸಹಕಾರಿ ಹೇಗೆ?

35) ಒಂದು ಪ್ರದೇಶಕ್ಕನುಗುಣವಾಗಿ ವಿಂಗಡಣೆಯಾಗಿರುವ ನಾಲ್ಕು ವಿಧದ ಮಾರುಕಟ್ಟೆಗಳನ್ನು ತಿಳಿಸಿ.

36) ಬಸವೇಶ್ವರರ ಕಾಯಕ ತತ್ವವನ್ನು ಚರ್ಚಿಸಿ.

37) ಸ್ಥಿರಾತ್ಮಕ ಅರ್ಥಶಾಸ್ತ್ರ ಮತ್ತು ಚಲನಾತ್ಮಕ ಅರ್ಥಶಾಸ್ತ್ರದ ವ್ಯತ್ಯಾಸಗಳನ್ನು ಪಟ್ಟಿ ಮಾಡಿರಿ.

38) ನದಿಗಳು ರಾಜ್ಯಗಳ ನಡುವೆ ಹೇಗೆ ಸಾಮರಸ್ಯ ಬೆಳೆಸುತ್ತವೆ?

39) ಭಾರತೀಯ ಕೃಷಿ ವಲಯದ ಪ್ರಾಮುಖ್ಯತೆವನ್ನು ವಿವರಿಸಿ.

40) ರಾಷ್ಟ್ರೀಯ ಐಕ್ಯತೆಯನ್ನು ಪ್ರೋತ್ಸಾಹಿಸುವ ಅಂಶಗಳಾವುವು?

41) ರಸ್ತೆ ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ.

42) ಕುದುರೆಮುಖ ಗಿರಧಾಮದ ಕುರಿತು ಟಿಪ್ಪಣಿ ಬರೆಯಿರಿ.

43) ಬೆಂಗಳೂರು ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು ಕೇಂದ್ರೀಕೃತವಾಗಿವೆ. ಏಕೆ?

44) ನೀವು ವಾಸಿಸುವ ಸಮುದಾಯವು ಗ್ರಾಮ ಸಮುದಾಯವೆಂದು ಭಾವಿಸಿ, ಅಲ್ಲಿ ಕಂಡು ಬರುವ ಸಮಸ್ಯೆಗಳನ್ನು ತಿಳಿಸಿ.

45) ಲೆಕ್ಕ ಬರಹದಲ್ಲಿ ಬರುವ ಖಾತೆಯ ವಿಧಗಳನ್ನು ಹೆಸರಿಸಿ.

46) ಲಿಯೋನಾರ್ಡೊ ಡ ವಿಂಚಿಯ ಮುಖ್ಯ ವರ್ಣಚಿತ್ರಗಳಾವುವು?

47) ಅಮೇರಿಕದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳನ್ನು ತಿಳಿಸಿ.

**IV. ಈ ಕೆಳಗಿನ ಪ್ರಶ್ನೆಗಳಗೆ ಐದು/ಆರು ವಾಕ್ಯಗಳಲ್ಲಿ ಉತ್ತರಿಸಿ: 6x3=18**

48) ಎರಡನೇ ದೇವರಾಯನ ಸಾಧನಗಳೇನು? ಅಥವಾ

ಶಿವಾಜಿಯ ಆಡಳಿತ ವ್ಯವಸ್ಥೆಯನ್ನು ವಿವರಿಸಿ.

49) ಭಾರತ ಸಂವಿಧಾನದ ಲಕ್ಷಣಗಳಾವುವು? ಅಥವಾ

ಲೋಕಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳು ಯಾವುವು?

50) ಇತ್ತೀಚಿನ ದಿನಗಳಲ್ಲಿ ಆಧುನಿಕ ಕೇಂದ್ರ ಕುಟುಂಬಗಳು ಹೆಚ್ಚಾಗುತ್ತಿವೆ. ಈ ಹೇಳಿಕೆಯನ್ನು ಸಮರ್ಥಿಸಿ. ಅಥವಾ

ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಸಾಮಾಜೀಕರಣವು ಅತ್ಯಂತ ಮಹತ್ವದ್ದಾಗಿದೆ. ಈ ಹೇಳಿಕೆಯನ್ನು ಸಮರ್ಥಿಸಿ

51) ಕರ್ನಾಟಕದ ಭೂ ಬಳಕೆಯ ಮಾದರಿಗಳನ್ನು ಹೆಸರಿಸಿ. ಅಥವಾ

ಕರ್ನಾಟಕದಲ್ಲಿ ದೊರೆಯುವ ಪ್ರಮುಖ ಖನಿಜಗಳನ್ನು ಹೆಸರಿಸಿ.

52) ರಿಸರ್ವ್ ಬ್ಯಾಂಕಿನ ಕಾರ್ಯಗಳನ್ನು ವಿವರಿಸಿ. ಅಥವಾ

ಶ್ರಮ ವಿಭಜನೆಯ ಅನುಕೂಲಗಳನ್ನು ವಿವರಿಸಿ.

53) ನಿಯಂತ್ರಣವು ನಿರ್ವಹಣಾ ಕಾರ್ಯದಲ್ಲಿ ಬಹುಮುಖ್ಯವಾದುದು. ಹೇಗೆ? ಅಥವಾ

ವ್ಯವಹಾರ ಸಂಸ್ಥೆಗಳಿಗೆ ಹಣಕಾಸು ಅತ್ಯಂತ ಮಹತ್ವದಾದುದು. ಹೇಗೆ?

**V. ಈ ಕೆಳಗಿನ ಪ್ರಶ್ನೆಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ: 1x4=4**

54) ರಜಪೂತ ಅರಸರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ವಿವರಿಸಿ.

**VI. ನಕ್ಷೆ ರಚನೆ: 1+3=4**

55) ಕರ್ನಾಟಕದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ.

ಎ) ಕರಾವಳಿ ಪ್ರದೇಶ ಬಿ) ಬೆಂಗಳೂರು ಸಿ) ನಾಗರಹೊಳೆ

# ಸಂಕಲನಾತ್ಮಕ ಮೌಲ್ಯಮಾಪನ-2

## ವಾರ್ಷಿಕ ಪರೀಕ್ಷೆ ಪ್ರಶ್ನೆ ಪತ್ರಿಕೆಯ ನೀಲನಕ್ಷೆ

**ವಿಷಯ:- ಸಮಾಜ ವಿಜ್ಞಾನ** **ತರಗತಿ:-9ನೇ ತರಗತಿ**

### ಸಾಮರ್ಥ್ಯಾನುಸಾರ ಅಂಕ ಹಂಚಿಕೆ

| ಕ್ರ. ಸಂ | ಸಾಮರ್ಥ್ಯ | ಅಂಕಗಳು | ಶೇಕಡವಾರು |
|---|---|---|---|
| 01 | ಜ್ಞಾನ | 24 | 26.6 |
| 02 | ತಿಳುವಳಿಕೆ | 38 | 42.2 |
| 03 | ಅನ್ವಯ | 24 | 26.6 |
| 04 | ಕೌಶಲ | 4 | 4.6 |

### ಕ್ಲಿಷ್ಟಾನುಸಾರ ಅಂಕ ಹಂಚಿಕೆ

| ಕ್ರ.ಸಂ | ಕ್ಲಿಷ್ಟತೆ | ಅಂಕಗಳು | ಶೇಕಡವಾರು |
|---|---|---|---|
| 01 | ಸುಲಭ | 28 | 31.1 |
| 02 | ಸಾಮಾನ್ಯ | 37 | 41.1 |
| 03 | ಕಠಿಣ | 25 | 27.7 |

### ಪ್ರಶ್ನಾನುಸಾರ ಅಂಕ ಹಂಚಿಕೆ

| ಕ್ರ.ಸಂ | ಪ್ರಶ್ನೆಗಳ ಮಾದರಿಗಳು | ಪ್ರಶ್ನೆಗಳ ಸಂಖ್ಯೆ | ಅಂಕಗಳು |
|---|---|---|---|
| 01 | ವಸ್ತುನಿಷ್ಠ ಪ್ರಶ್ನೆಗಳು | 15 | 15 |
| 02 | ಸರಳ ಉತ್ತರದ ಪ್ರಶ್ನೆಗಳು | 15 | 15 |
| 03 | ಕಿರು ಉತ್ತರದ ಪ್ರಶ್ನೆಗಳು | 17 | 34 |
| 04 | ದೀರ್ಘ ಉತ್ತರದ ಪ್ರಶ್ನೆಗಳು-1 | 6 | 18 |
| 05 | ದೀರ್ಘ ಉತ್ತರದ ಪ್ರಶ್ನೆಗಳು-2 | 1 | 4 |
| 06 | ನಕ್ಷೆ | 1 | 4 |
| | ಒಟ್ಟು | 55 | 90 |

### ವಿಷಯವಾರು ಅಂಕ ಹಂಚಿಕೆ

| ಕ್ರ.ಸಂ | ವಿಷಯ | ವ.ಪ್ರ | ಸ.ಉ.ಪ್ರ | ಕಿ.ಉ.ಪ್ರ | ದೀ.ಉ.ಪ್ರ1 | ದೀ.ಉ.ಪ್ರ2 | ನಕ್ಷೆ | ಪ್ರಶ್ನೆಗಳು | ಅಂಕಗಳು |
|---|---|---|---|---|---|---|---|---|---|
| 01 | ಇತಿಹಾಸ | 4(4) | 5(5) | 5(10) | 1(3) | 1(4) | | 16 | 26 |
| 02 | ರಾಜ್ಯಶಾಸ್ತ್ರ | 2(2) | 3(3) | 2(4) | 1(3) | | | 8 | 12 |
| 03 | ಸಮಾಜ ಶಾಸ್ತ್ರ | 1(1) | 2(2) | 1(2) | 1(3) | | | 5 | 8 |
| 04 | ಭೂಗೋಳ | 4(4) | 3(3) | 5(10) | 1(3) | | 1(4) | 14 | 24 |
| 05 | ಅರ್ಥಶಾಸ್ತ್ರ | 2(2) | 1(1) | 2(4) | 1(3) | | | 6 | 10 |
| 06 | ವ್ಯವಹಾರ ಅಧ್ಯಯನ | 2(2) | 1(1) | 2(4) | 1(3) | | | 6 | 10 |
| | ಒಟ್ಟು | 15(15) | 15(15) | 17(34) | 6(18) | 1(4) | 1(4) | 55 | 90 |

| ಕ್ರ. | ಘಟಕದ ಹೆಸರು | ಜ್ಞಾನ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ | | | | | ಒಟ್ಟು | ಒಟ್ಟು |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| ಸಂ | | 01 | 02 | 03 | 04 | 05 | 01 | 02 | 03 | 04 | 05 | 01 | 02 | 03 | 04 | 05 | 01 | 02 | 03 | 04 | 05 | ಪ್ರಶ್ನೆ | ಅಂಕ |
| | ಇತಿಹಾಸ | | | | | | | | | | | | | | | | | | | | | | |
| 1 | ಕ್ರೈಸ್ತ ಮತ್ತು ಇಸ್ಲಾಂ ಮತಗಳು | 1(1) | | | | | | | | | | | | 1(2) | | | | | | | | 2 | 3 |
| 2 | ಮಧ್ಯಯುಗದ ಯುರೋಪ್ | | 1(1) | | | | | 1(1) | | | | | | | | | | | | | | 2 | 2 |
| 3 | 9 ರಿಂದ 14ನೇ ಶತಮಾನದ ಭಾರತ | | 1(1) | | | | | | | | 1(4) | | | | | | | | | | | 2 | 5 |
| 4 | ಭಾರತದ ಮತ ಪ್ರವರ್ತಕರು | | 1(1) | | | | | | | | | | | 1(2) | | | | | | | | 2 | 3 |
| 5 | ವಿಜಯನಗರ ಮತ್ತು ಬಹುಮನಿ ರಾಜ್ಯ | 1(1) | | | | | | | | 1(3) | | | | | | | | | | | | 3 | 5 |
| 6 | ಮೊಘಲರು ಮತ್ತು ಮರಾಠರು | | 1(1) | | | | | | | 1(3) | | | | | | | | | | | | | |
| 7 | ಭಕ್ತಿಪಂಥ | | | | | | | | 1(2) | | | | | | | | | | | | | 1 | 2 |
| 8 | ಆಧುನಿಕ ಯುರೋಪ್ | | | 1(2) | | | 1(1) | | | | | | | | | | | | | | | 2 | 3 |
| 9 | ಕ್ರಾಂತಿ & ರಾಷ್ಟ್ರ ಪ್ರಭುತ್ವಗಳ ಉದಯ | 1(1) | | | | | | | 1(2) | | | | | | | | | | | | | 2 | 3 |
| | ರಾಜ್ಯಶಾಸ್ತ್ರ | | | | | | | | | | | | | | | | | | | | | | |
| 1 | ನಮ್ಮ ಸಂವಿಧಾನ | | | | | | | 1(1) | | 1(3) | | | | | | | | | | | | 3 | 5 |
| 2 | ಕೇಂದ್ರ ಸರ್ಕಾರ | | | | | | | | | 1(3) | | 1(1) | | | | | | | | | | | |
| 3 | ರಾಜ್ಯ ಸರ್ಕಾರ | | | | | | | | | | | | 1(1) | 1(2) | | | | | | | | 2 | 3 |
| 4 | ದೇಶದ ರಕ್ಷಣೆ | 1(1) | | | | | | 1(1) | | | | | | | | | | | | | | 2 | 2 |
| 5 | ರಾಷ್ಟ್ರೀಯ ಭಾವೈಕ್ಯತೆ | | | 1(2) | | | | | | | | | | | | | | | | | | 1 | 2 |
| | ಸಮಾಜಶಾಸ್ತ್ರ | | | | | | | | | | | | | | | | | | | | | | |
| 1 | ಕುಟುಂಬ | | | | | | 1(1) | | | | | | | | 1(3) | | | | | | | 3 | 5 |
| 2 | ಸಾಮಾಜೀಕರಣ&ಕುಟುಂಬ ಸಂಬಂಧಗಳು | | | | | | | 1(1) | | | | | | | 1(3) | | | | | | | | |
| 3 | ನಗರ ಮತ್ತು ಸಮುದಾಯ | | | | | | | 1(1) | | | | | | 1(2) | | | | | | | | 2 | 3 |
| | ಭೂಗೋಳ ಶಾಸ್ತ್ರ | | | | | | | | | | | | | | | | | | | | | | |
| 1 | ನಮ್ಮ ರಾಜ್ಯ– ಕರ್ನಾಟಕ | | | 1(2) | | | | | | | | | | | | | | | | | | 1 | 2 |
| 2 | ಪ್ರಾಕೃತಿಕ ವಿಭಾಗಗಳು | 1(1) | | | | | | | | | | | | | | | 1* | | | | | 2 | 2 |

| | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| 3 | ಕರ್ನಾಟಕದ ವಾಯುಗುಣ | | 1(1) | | | | | | | | | | 1(1) | | | | 1* | | | | | 2 | 3 |
| 4 | ಕರ್ನಾಟಕದ ಜಲಸಂಪನ್ಮೂಲಗಳು | 1(1) | | | | | | | | | | | | 1(2) | | | | | | | | 2 | 3 |
| 5 | ಕರ್ನಾಟಕದ ಭೂ ಸಂಪತ್ತು | | | | 1(3) | | | | | | | | | | | | 1* | | | | | 2 | 5 |
| 6 | ಖನಿಜ ಸಂಪನ್ಮೂಲಗಳು | | | | 1(3) | | | | | | | 1(1) | | | | | | | | | | | |
| 7 | ಸಾರಿಗೆ | | | | | | | | 1(2) | | | | | | | | | | | | | 1 | 2 |
| 8 | ಕರ್ನಾಟಕ ಕೈಗಾರಿಕೆಗಳು | 1(1) | | | | | | | | | | | | 1(2) | | | | | | | | 2 | 3 |
| 9 | ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರಗಳು | | | | | | | | 1(2) | | | | | | | | | | | | | 1 | 2 |
| 10 | ಕರ್ನಾಟಕದ ಜನಸಂಖ್ಯೆ | | | | | | | 1(1) | | | | | | | | | 1* | | | | | 1 | 2 |
| | **ಅರ್ಥಶಾಸ್ತ್ರ** | | | | | | | | | | | | | | | | | | | | | | |
| 1 | ಆರ್ಥಿಕ ರಚನೆ | | | | | | | | | | | | | 1(2) | | | | | | | | 1 | 2 |
| 2 | ಭಾರತೀಯ ಅರ್ಥವ್ಯವಸ್ಥೆಯ ವಲಯಗಳು | 1(1) | | | | | | | 1(2) | | | | | | | | | | | | | 2 | 3 |
| 3 | ಹಣ ಮತ್ತು ಸಾಲ | 1(1) | | | | | | | | 1(3) | | | | | | | | | | | | 3 | 5 |
| 4 | ಶ್ರಮ ಮತ್ತು ಉದ್ಯೋಗ | | | | | | | 1(1) | | 1(3) | | | | | | | | | | | | | |
| | **ವ್ಯವಹಾರ ಅಧ್ಯಯನ** | | | | | | | | | | | | | | | | | | | | | | |
| 1 | ವ್ಯವಹಾರ ನಿರ್ವಹಣೆ | | | | | | | | | | | | | | 1(3) | | | | | | | 2 | 4 |
| 2 | ಹಣಕಾಸಿ ನಿರ್ವಹಣೆ | 1(1) | | | | | | | | | | | | | 1(3) | | | | | | | | |
| 3 | ಮಾರಾಟ ವ್ಯವಸ್ಥೆ | | | | | | 1(1) | | 1(2) | | | | | | | | | | | | | 2 | 3 |
| 4 | ಲೆಕ್ಕಶಾಸ್ತ್ರ | | | | | | | 1(1) | 1(2) | | | | | | | | | | | | | 2 | 3 |
| | **ಒಟ್ಟು** | 10(10) | 5(5) | 3(6) | 1(3) | | 3(3) | 8(8) | 7(14) | 3(9) | 1(4) | 2(2) | 2(2) | 7(14) | 2(6) | | 1(4) | | | | | 55 | 90 |

* ನಕ್ಷೆಗೆ ಸಂಬಂಧಿಸಿದ ಪ್ರಶ್ನೆಗಳು.

## ಮಾದರಿ ಉತ್ತರ


| ಪ್ರ.ಸಂ | ಉತ್ತರ |
|---|---|
| 1 | ಸಿ) ಬೆತ್ಲಹ್ಯಾಂ |
| 2 | ಬಿ) ರಿಸರ್ವ್ ಬ್ಯಾಂಕ್ |
| 3 | ಎ) ಕೊಡಗು |
| 4 | ಸಿ) ಕುಟುಂಬ |
| 5 | ಬಿ) ಪ್ರಣವ್ ಮುಖರ್ಜಿ |
| 6 | ಎ) ದಾವಣಗೆರೆ |
| 7 | ಎ) ಕ್ರಿ.ಶ 1336 |
| 8 | ಡಿ) ಕರ್ನಾಟಕವು ದೇಶದಲ್ಲಿಯೇ ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸುತ್ತದೆ. |
| 9 | ಸಿ) ರಾಷ್ಟ್ರಪತಿ |
| 10 | ಸಿ) ಗ್ರಾಹಕ ಮುಂಗಡ |
| 11 | ಬಿ) ಶರಾವತಿ |
| 12 | ಸಿ) ಗಾಂಧೀಜಿ |
| 13 | ಎ)ಪುನರ್ ಜನ್ಮ |
| 14 | ಬಿ) ಉತ್ಪನ್ನ ಮಿಶ್ರಣ |
| 15 | ಬಿ) ಸ್ಪಿರಿಟ್ ಆಫ್ ಲಾಸ್ |
| 16 | ಕರ್ನಾಟಕದ ಕಾಡುಗಳಲ್ಲಿ ವಿಶೇಷವಾಗಿ ಶ್ರೀಗಂಧದ ಮರಗಳು ಬೆಳೆಯುತ್ತವೆ. |
| 17 | ಊಳಿಗಮಾನ್ಯ ಪದ್ಧತಿಯು ಬಲಿಷ್ಠ ಮತ್ತು ಅಶಕ್ತರ ನಡುವೆ ಇದ್ದಂತಹ ಒಪ್ಪಂದ ಎನ್ನಬಹುದು. |
| 18 | ಕುತ್ಬುದ್ದೀನ್ ಐಬಕ್ |
| 19 | ಕೈಗರಿಕೀಕರಣವು ತಯಾರಿಕೆಯ ಉದ್ಯಮದ ಬೆಳವಣಿಗೆಯನ್ನು ಸೂಚಿಸುತ್ತದೆ. |
| 20 | ಇಡೀ ರಾಷ್ಟ್ರವನ್ನು ಒಂದು ಚೌಕಟ್ಟಿನಲ್ಲಿ ಹೇಗೆ ನಿಯಂತ್ರಿಸಬೇಕು ಎಂದು ತಿಳಿಸಿಕೊಡುವ ವ್ಯವಸ್ಥೆಯನ್ನು ಸಂವಿಧಾನ ಎನ್ನುವರು. |
| 21 | ಅಕ್ಬರ್ |
| 22 | ಪ್ರತಿ ಚದುರ ಕಿ.ಮೀ ಕ್ಷೇತ್ರದಲ್ಲಿ ವಾಸಿಸುವ ಸರಾಸರಿ ಜನಸಂಖ್ಯೆಯನ್ನು ಜನಸಾಂದ್ರತೆ ಎನ್ನುವರು. |
| 23 | ಕಪ್ಪು |
| 24 | ಸೀಬರ್ಡ್ |
| 25 | ಅದ್ವೈತ |
| 26 | 14 ವರ್ಷಗಳ ಒಳಗಿನ ಮಗು ಕೂಲಿಗಾಗಿ ದುಡಿಯುತ್ತಿದ್ದರೆ ಅವನನ್ನು ಬಾಲ ಕಾರ್ಮಿಕ ಎನ್ನುವರು. |
| 27 | ಮಾನವನು ಸಾಮಾಜಿಕ ವ್ಯಕ್ತಿಯಾಗಿ ರೂಪುಗೊಳ್ಳುವ ಪ್ರಕ್ರಿಯೆಯನ್ನು ಸಾಮಾಜೀಕರಣ ಎನ್ನುತ್ತಾರೆ. |

| | |
|---|---|
| 28 | ಊಳಿಗಮಾನ್ಯ ಪದ್ಧತಿಯಲ್ಲಿ ಹಿಡುವಳಿದಾರ ಹೊಂದಿದ್ದ ಭೂಮಿಯನ್ನು ಉಂಬಳಿ ಕರೆಯುತ್ತಿದ್ದರು |
| 29 | ಸಿದ್ಧರಾಮಯ್ಯ |
| 30 | ದಿನವಹಿ ವ್ಯವಹಾರ ವಹಿವಾಟುಗಳನ್ನು ದಾಖಲು ಮಾಡುವ ಪುಸ್ತಕವನ್ನು ಕಚ್ಚಾಪುಸ್ತಕ ಎನ್ನುತ್ತಾರೆ. |
| 31 | ❖ ಬೆಂಗಳೂರು<br>❖ ಮೈಸೂರು<br>❖ ಬೆಳಗಾವಿ<br>❖ ಕಲಬುರಗಿ. |
| 32 | ❖ ದೇವರನ್ನು ತಂದೆಯ ಸ್ಥಾನದಲ್ಲಿ ಕಲ್ಪಿಸಿಕೊಳ್ಳುವಂತೆ ಬೋಧಿಸಿದರು. ಮಾನವರು ದೇವರ ಮಕ್ಕಳೆಂದು ತಿಳಿಸಿದರು.<br>❖ ಮಾನವ ಸಂಕುಲ ಭ್ರಾತೃತ್ವವನ್ನು ಪ್ರತಿಪಾದಿಸಿದರು.<br>❖ ಯಾವುದೇ ಆಡಂಬರದ ಧಾರ್ಮಿಕ ಆಚರಣೆಗಳಲ್ಲಿ ನಂಬಿಕೆ ಇಟ್ಟಿರಲಿಲ್ಲ.<br>❖ ಮಾನವನು ತಾನು ಮಾಡಿದ ತಪ್ಪುಗಳಿಂದಾಗಿ ಪಶ್ಚಾತ್ತಾಪ ಪಟ್ಟರೆ, ದೇವರಿಂದ ಅವನು ಕ್ಷಮೆಯನ್ನು ಪಡೆಯುತ್ತಾನೆ ಎಂದು ತಿಳಿಸಿದರು. |
| 33 | ❖ ಹಿಂದೂ ಆಚರಣೆಗಳ ಸುಧಾರಣೆ ಮತ್ತು ಹಿಂದೂ ಹಾಗೂ ಮುಸ್ಲಿಂರಲ್ಲಿನ ಮಧುರ ಬಾಂಧವ್ಯವನ್ನು ಉಂಟು ಮಾಡುವುದು ಭಕ್ತಿ ಪಂಥದ ಎರಡು ಮುಖ್ಯ ಉದ್ದೇಶಗಳಾಗಿದ್ದವು.<br>❖ ಹಿಂದೂ ಸಮಾಜದಲ್ಲಿನ ಅನೇಕ ನ್ಯೂನ್ಯತೆಗಳನ್ನು ಸುಧಾರಕರು ನಿವಾರಿಸಿದರು.<br>❖ ಭಾರತದ ಪ್ರಾದೇಶಿಕ ಭಾಷೆಗಳು ವಿಕಾಸಗೊಂಡವು.<br>❖ ಅವರು ದೇಶಿ ಭಾಷೆಗಳಲ್ಲಿ ಬರೆದು ಅವುಗಳ ಬೆಳವಣಿಗೆಗೆ ಸಹಾಯ ಮಾಡಿದರು.<br>❖ ಇದು ಭಾರತೀಯ ಸಂಸ್ಕೃತಿಯ ವಿಕಾಸಕ್ಕೆ ಕಾರಣವಾಯಿತು |
| 34 | ❖ ಮೊಕದ್ದಮೆಗಳನ್ನು ಶೀಘ್ರಗತಿಯಲ್ಲಿ ಮತ್ತು ಕಡಿಮೆ ವೆಚ್ಚದಲ್ಲಿ ಇತ್ಯರ್ಥಪಡಿಸಲು ಜನತಾ ನ್ಯಾಯಾಲಯಗಳು 1985 ರಲ್ಲಿ ಅಸ್ಥಿತ್ವಕ್ಕೆ ಬಂದಿವೆ.<br>❖ ಒಂದು ನಿರ್ದಿಷ್ಟ ಪ್ರಕರಣದಲ್ಲಿ ಭಾಗಿಯಾದ ಇಬ್ಬರು ವ್ಯಕ್ತಿಗಳ ನಡುವಿನ ವಿವಾದಗಳನ್ನು ರಾಜಿ ಸಂಧಾನ ಮಾಡಿಸುವುದು ಇದರ ಉದ್ದೇಶವನ್ನು ಹೊಂದಿದೆ.<br>❖ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೆ ಬಾಕಿ ಇರುವ ಮೊಕದ್ದಮೆಗಳನ್ನು ಇಲ್ಲಿ ಇತ್ಯರ್ಥಪಡಿಸಿಕೊಳ್ಳಬಹುದು. |
| 35 | ❖ ಸ್ಥಳೀಯ ಮಾರುಕಟ್ಟೆಗಳು<br>❖ ಪ್ರಾದೇಶಿಕ ಮಾರುಕಟ್ಟೆಗಳು<br>❖ ರಾಷ್ಟ್ರೀಯ ಮಾರುಕಟ್ಟೆಗಳು<br>❖ ಅಂತರರಾಷ್ಟ್ರೀಯ ಮಾರುಕಟ್ಟೆಗಳು |
| 36 | ❖ ಪ್ರತಿಯೊಬ್ಬನು ದುಡಿದು ತಿನ್ನಬೇಕು. ವೃತ್ತಿಯಲ್ಲಿ ಮೇಲು-ಕೀಳೆಂಬುದಿಲ್ಲವೆಂದು ಸಾರಿದರು.<br>❖ ಸಮಾಜದ ಸ್ವಾವಲಂಬನೆಗೆ ಕಾಯಕವೇ ಕೈಲಾಸ ಎಂಬ ತತ್ವವನ್ನು ಪ್ರತಿಪಾದಿಸಿದರು.<br>❖ ಬಸವೇಶ್ವರರ ಉದ್ದೇಶ ಜನರಲ್ಲಿ ದುಡಿಮೆಯ ಸಂಸ್ಕೃತಿಯನ್ನು ಬೆಳೆಸುವುದಾಗಿತ್ತು. |
| 37 | ❖ <u>ಸ್ಥಿರಾತ್ಮಕ ಅರ್ಥಶಾಸ್ತ್ರ:</u>ಯಾವುದೇ ಬದಲಾವಣೆಗಳಿರುವುದಿಲ್ಲ. ಕಾಲಾತೀತ ಅರ್ಥವ್ಯವಸ್ಥೆಯಾಗಿದೆ.<br>❖ <u>ಚಲನಾತ್ಮಕ ಅರ್ಥಶಾಸ್ತ್ರ :</u> ನಿಂತರ ಬದಲಾವಣೆ ಎಂದರ್ಥ. ಕಾಲಕಾಲಕ್ಕೆ ಅರ್ಥವ್ಯವಸ್ಥೆಯಲ್ಲಾಗುವ ಬದಲಾವಣೆಯ ಪ್ರಕ್ರಿಯೆ ಸೂಚಿಸುತ್ತದೆ. |

| | |
|---|---|
| 38 | ❖ ಭಾರತದಲ್ಲಿ ನದಿಗಳು ಹಲವಾರು ರಾಜ್ಯಗಳಲ್ಲಿ ಹರಿಯುತ್ತವೆ. ಉದಾ : ಕಾವೇರಿ ನದಿಯು ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ರಾಜ್ಯಗಳಲ್ಲಿ ಹರಿಯುತ್ತದೆ.<br>❖ ಕೃಷ್ಣಾ ನದಿಯು ಮಹಾರಾಷ್ಟ್ರ, ಕರ್ನಾಟಕ, ಆಂದ್ರಪ್ರದೇಶಗಳಲ್ಲಿ ಹರಿಯುತ್ತದೆ.<br>❖ ಈ ರಾಜ್ಯಗಳು ಜಲವಿವಾದಗಳಿದ್ದಾಗ್ಯೂ ನದಿಯ ನೀರನ್ನು ಕೃಷಿ ಕ್ಷೇತ್ರಕ್ಕೆ, ಕೈಗಾರಿಕಾ ಕ್ಷೇತ್ರಕ್ಕೆ ಮತ್ತು ಕುಡಿಯುವ ನೀರಿನ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. |
| 39 | ❖ ಶೇ 52 ಕ್ಕಿಂತ ಹೆಚ್ಚು ಜನ ಇಂದಿಗೂ ಕೃಷಿಯನ್ನೇ ಅವಲಂಬಿಸಿದ್ದಾರೆ.<br>❖ ಕೃಷಿ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುತ್ತದೆ.<br>❖ ಜನರಿಗೆ ಆಹಾರ ಮತ್ತು ಪ್ರಾಣಿಗಳಿಗೆ ಮೇವನ್ನು ಪೂರೈಸುತ್ತದೆ.<br>❖ ರೈತರು ಉಳಿತಾಯದ ಮೂಲಕ ಕೃಷಿಯು ಬಂಡವಾಳದ ಸಂಗ್ರಹಕ್ಕೆ ಸಹಕರಿಸುತ್ತದೆ. |
| 40 | ❖ ಜಾತ್ಯತೀತತೆ<br>❖ ಪ್ರಜಾಪ್ರಭುತ್ವ<br>❖ ರಾಷ್ಟ್ರೀಯ ಹಬ್ಬಗಳು<br>❖ ನಮ್ಮ ರಾಷ್ಟ್ರೀಯ ಚಿನ್ಹೆಗಳು ಅಥವಾ ರಾಷ್ಟ್ರಲಾಂಛನ<br>❖ ಪರಸ್ಪರ ಅನ್ಯೋನ್ಯತೆ |
| 41 | ❖ ರಸ್ತೆಗಳನ್ನು ಸುಲಭವಾಗಿ, ಕಡಿಮೆ ವೆಚ್ಚದಲ್ಲಿ ನಿರ್ಮಿಸಬಹುದು.<br>❖ ಪ್ರಯಾಣಿಕರು ಸರಕುಗಳನ್ನು ರಾಜ್ಯದ ಮೂಲೆ ಮೂಲೆಗೂ ಸಾಗಿಸಬಹುದು.<br>❖ ರಸ್ತೆಗಳು ಅಭಿವೃದ್ಧಿಯು ರಾಜ್ಯದ ಕೃಷಿ, ಕೈಗಾರಿಕೆ, ಗಣಿಗಾರಿಕೆ ಮತ್ತು ವಾಣಿಜ್ಯೋದ್ಯಮಗಳ ಪ್ರಗತಿಯನ್ನು ನಿರ್ಧರಿಸುತ್ತದೆ.<br>❖ ರಸ್ತೆ ಸಾರಿಗೆಗಳು ರೈಲು ಸಾರಿಗೆಗಳಿಗೆ ಪೂರಕವಾಗಿವೆ. |
| 42 | ❖ ಕರ್ನಾಟಕದಲ್ಲಿ ಅನೇಕ ಗಿರಿಧಾಮಗಳು ಕಂಡುಬರುತ್ತವೆ. ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ಗಿರಿಧಾಮ ಪ್ರಮುಖವಾಗಿದ್ದು, ಇದರ ಸುತ್ತಲೂ ಹಸಿರಿನಿಂದ ಕೂಡಿದ ದಟ್ಟಅರಣ್ಯಗಳು, ಬೆಟ್ಟಗಳು, ಕಾಫಿತೋಟಗಳು, ಜಲಪಾತಗಳು ಇರುವುದರಿಂದ ಆಕರ್ಷಣೀಯ ಸ್ಥಳವಾಗಿದೆ. |
| 43 | ❖ ಉತ್ತಮ ಹವಾಮಾನ, ವಿದ್ಯುತ್ಪೂರೈಕೆ, ತಾಂತ್ರಿಕಪರಿಣಿತರು, ಆರ್ಥಿಕನೆರವು, ವಿಶಾಲವಾದ ಮಾರುಕಟ್ಟೆ ಹಾಗೂ ಮೂಲ ಸೌಕರ್ಯಗಳಿರುವುದರಿಂದ ಬೃಹತ್ ಬೆಂಗಳೂರು ಭಾರತದ ಪ್ರತಿಷ್ಠಿತ ಮಾಹಿತಿ ತಂತ್ರಜ್ಞಾನ ಕೇಂದ್ರವಾಗಿ ಹೊರಹೊಮ್ಮಿದೆ. |
| 44 | ❖ ಕೃಷಿ ಸಮಸ್ಯೆಗಳು<br>❖ ಗುಡಿ ಕೈಗಾರಿಕೆ ಸಮಸ್ಯೆಗಳು<br>❖ ಅನಕ್ಷರತೆ, ಬಡತನ ಮತ್ತು ನಿರುದ್ಯೋಗ<br>❖ ಆರೋಗ್ಯ ವ್ಯವಸ್ಥೆಯ ಕೊರತೆ<br>❖ ನಾಗರಿಕ ಸೌಲಭ್ಯಗಳ ಕೊರತೆ |
| 45 | ❖ ವ್ಯಕ್ತಿ ಖಾತೆಗಳು, ಉದಾ: ಸುರೇಶರವರ ಖಾತೆ. ಬ್ಯಾಂಕ್ ಖಾತೆ.<br>❖ ಆಸ್ತಿ ಖಾತೆಗಳು, ಉದಾ: ಕಟ್ಟಡಗಳ ಖಾತೆ, ನಗದು ಖಾತೆ.<br>❖ ನಾಮಾ ಮಾತ್ರ ಖಾತೆಗಳು, ಉದಾ: ಸಂಬಳಗಳನ್ನು ಕೊಟ್ಟಿದ್ದು, ಬ್ಯಾಂಕಿನಿಂದ ಬಡ್ಡಿ ಬಂದಿದ್ದು. |

| | | |
|---|---|---|
| 46 | ❖ ಲಿಯೋನಾರ್ಡ್ ಡಾ ವಿಂಚಿ – ಮೊನಾಲಿಸ ಮತ್ತು ಲಾಸ್ಟ್ ಸಪ್ಪರ್ | |
| 47 | ❖ ವಸಾಹತುಗಳ ಬಗ್ಗೆ ಮಾತೃದೇಶದ ಧೋರಣೆ ಮತ್ತು ವಸಾಹತುಗಳ ಸ್ವಾತಂತ್ರ್ಯ ಪ್ರೇಮ.<br>❖ ಸಪ್ತವಾರ್ಷಿಕ ಯುದ್ಧದ ಪರಿಣಾಮಗಳು.<br>❖ ನೌಕಾ ಕಾಯಿದೆಗಳು, ಕ್ವಿಬೆಕ್ ಕಾಯ್ದೆ, ಟೌನ್ ಶೆಂಡ್ ತೆರಿಗೆಗಳು.<br>❖ ಥಾಮಸ್ ಫೈನ್, ಜಾನ್ ಆಡಮ್ಸ್, ಸ್ಯಾಮುಯಲ್ ಆಡಮ್ಸ್, ಜಾನ್ ಎಡ್ವರ್ಡ್ ಕೋಕ್ ಮತ್ತು ಬೆಂಜಮಿನ್ ಫ್ರಾಂಕ್ಲಿನ್ ಮುಂತಾದ ಬರಹಗಾರರ ಪ್ರಭಾವ.<br>❖ ಬಾಸ್ಟನ್ ಚಹಾಕೂಟದ ಘಟನೆ | |
| 48 | ❖ ಸಂಗಮ ವಂಶದಲ್ಲಿಯೇ ಪ್ರೌಢದೇವರಾಯ ಅತ್ಯಂತ ಶ್ರೇಷ್ಠ ದೊರೆಯಾಗಿದ್ದು "ಗಜಬೇಂಟೆಕಾರ" ಎಂಬ ಬಿರುದನ್ನು ಧರಿಸಿದ್ದನು.<br>❖ ಒರಿಸ್ಸಾದ ಗಜಪತಿ ದೊರೆಗಳನ್ನು, ಗಡಿ ಪ್ರದೇಶದಲ್ಲಿನ ನಾಯಕರನ್ನು ಸೋಲಿಸಿ ಸಾಮ್ರಾಜ್ಯವನ್ನು ವಿಸ್ತರಿಸಿದನು.<br>❖ ಶ್ರೀಲಂಕಾದ ದೊರೆಗಳಿಂದ ಕಪ್ಪ ಕಾಣಿಕರಗಳನ್ನು ಸ್ವೀಕರಿಸಿದನು. ಪರಿಣಾಮವಾಗಿ "ದಕ್ಷಿಣಪಥದ ಚಕ್ರವರ್ತಿ" ಎನಿಸಿದನು.<br>❖ ಬಹುಮನಿ ಅಹಮದ್ ಷಾನನ್ನು ಸೋಲಿಸಿ ಮುದಗಲ್ ಮತ್ತು ಬಂಕಾಪುರಗಳನ್ನು ಸ್ವಾದೀನಪಡಿಸಿಕೊಂಡನು.<br>❖ ಈತನ ದಳಪತಿ ಲಕ್ಕಣದಂಡೇಶ ಯಶಸ್ವಿ ದಂಡಯಾತ್ರೆಯನ್ನು ಕೈಗೊಂಡನು.<br>❖ ಪರಮತ ಸಹಿಷ್ಣುವಾಗಿದ್ದ ಇವನು ಜೈನ ಮತ್ತು ವೈಷ್ಣವ ದೇವಾಲಯಗಳನ್ನು ನಿರ್ಮಿಸಿದನು | ❖ ಶಿವಾಜಿಯು ತನ್ನ ವಿಶಾಲವಾದ ರಾಜ್ಯದಲ್ಲಿ ಉತ್ತಮ ಆಡಳಿತವನ್ನು ಸಂಘಟಿಸಿದ್ದನು.<br>❖ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳಾಗಿ ವಿಂಗಡಿಸಿದ್ದನು.<br>❖ ಅವುಗಳನ್ನು ಸ್ವರಾಜ್ಯ ಮತ್ತು ಮೊಘಲರ ರಾಜ್ಯಗಳೆಂದು ಕರೆಯುತ್ತಿದ್ದರು.<br>❖ ಮರಾಠಿ ಆಡಳಿತ ಭಾಷೆಯಾಗಿತ್ತು.<br>❖ ಕೇಂದ್ರ ಸರ್ಕಾರದ ಮುಖ್ಯಸ್ಥನಾಇಗದ್ದ ದೊರೆಗೆ ಆಡಳಿತದಲ್ಲಿ ನೆರವು ನೀಡಲು ಅಷ್ಠ ಪ್ರಧಾನರೆಂಬ ಮಂತ್ರಗಳಿದ್ದರು.<br>❖ ಜೊತೆಗೆ ಸಹಾಯಕ್ಕಾಗಿ ಇತರೆ ಅಧಿಕಾರಿಗಳಿದ್ದರು.<br>❖ ಪ್ರಾಂತ್ಯ, ಜಿಲ್ಲೆ, ಗ್ರಾಮ ಆಡಳಿತದ ಘಟಕಗಳಾಗಿದ್ದವು. |
| 49 | ❖ ಲಿಖಿತ ಮತ್ತು ಬೃಹತ್ ಸಂವಿಧಾನ<br>❖ ಸರಳ ಮತ್ತು ಕಠಿಣ ಸಂವಿಧಾನ<br>❖ ಸಂಸದೀಯ ಸರ್ಕಾರ ಪದ್ಧತಿ<br>❖ ಗಣತಂತ್ರ ವ್ಯವಸ್ಥೆ<br>❖ ಸಂಯುಕ್ತ ಪದ್ಧತಿ<br>❖ ಮೂಲಭೂತ ಹಕ್ಕುಗಳು<br>❖ ಮೂಲಭೂತ ಕರ್ತವ್ಯಗಳು<br>❖ ರಾಜ್ಯ ನಿರ್ದೇಶಕ ತತ್ವಗಳು<br>❖ ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ<br>❖ ಏಕ ಪೌರತ್ವ<br>❖ ವಯಸ್ಕ ಮತದಾನ ಪದ್ಧತಿ<br>❖ ದ್ವಿಸದನ ಶಾಸಕಾಂಗ<br>❖ ಬಹುಪಕ್ಷ ಪದ್ಧತಿ | ❖ ಭಾರತದ ಪ್ರಜೆಯಾಗಿರಬೇಕು.<br>❖ 25 ವರ್ಷ ವಯೋಮಿತಿಯನ್ನು ಹೊಂದಿರಬೇಕು.<br>❖ ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿರಬಾರದು.<br>❖ ನ್ಯಾಯಾಲಯದಿಂದ ಅಪರಾಧ ಶಿಕ್ಷೆಗೆ ಒಳಗಾಗಿರಬಾರದು.<br>❖ ಸಂಸತ್ತು ಕಾಲಕಾಲಕ್ಕೆ ನಿಗಧಿಪಡಿಸುವ ಅರ್ಹತೆ ಪಡೆದಿರಬೇಕು |

| | | |
|---|---|---|
| 50 | ❖ ವೈಯಕ್ತಿಕತೆ<br>❖ ವೈಯಕ್ತಿಕ ಸುಖ<br>❖ ಸ್ವಯಂ ತೃಪ್ತಿ<br>❖ ಆಸ್ತಿಯ ಹಕ್ಕು<br>❖ ಬದಲಾದ ಸಾಮಾಜಿಕ ಮೌಲ್ಯಗಳು<br>❖ ಭೌಗೋಳಿಕ ಹಾಗೂ ಸಾಮಾಜಿಕ ಸಂರಚನೆ<br>❖ ಕೈಗಾರಿಕೀಕರಣ<br>❖ ನಗರೀಕರಣ<br>❖ ಪ್ರಜಾಸತಾತ್ಮಕ ಹಾಗೂ ಸಮಾನತೆಯ ತತ್ವಗಳು<br>❖ ಧಾರ್ಮಿಕ ಪ್ರಭಾವದ ಕುಗ್ಗುವಿಕೆ<br>❖ ಲೌಕಿಕ ಮನೋಭಾವನೆ<br>❖ ಸ್ತ್ರೀ–ಸ್ವಾತಂತ್ರ್ಯ | ❖ ಮಗುವಿನ ಸಾಮಾಜೀಕರಣದಲ್ಲಿ ಕುಟುಂಬದ ಪಾತ್ರ ಬಹಳ ಮುಖ್ಯವಾದುದು.<br>❖ ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮಗುವಿನ ಮೊದಲ ಗುರು.<br>❖ ತಂದೆ–ತಾಯಿಯರ ನಡೆ ನುಡಿ, ಚಟುವಟಿಕೆಗಳು, ವ್ಯವಹರಿಸುವಿಕೆ ಮೊದಲಾದ ಅಂಶಗಳು ಮಗುವಿನ ಮೇಲೆ ಪ್ರಭಾವ ಬೀರುತ್ತವೆ.<br>❖ ಪ್ರೀತಿ, ವಿಶ್ವಾಸ, ವಾತ್ಸಲ್ಯ, ಸಹನೆ, ಸಹಕಾರ, ಸಹೃದಯತೆ ಮೊದಲಾದ ಜೀವನ ಮೌಲ್ಯಗಳನ್ನು ಮಗು ಮನೆಯಲ್ಲಿ ಕಲಿಯುತ್ತದೆ.<br>❖ ಮಗುವಿಗೆ ಹೊಗಳಿಕೆ, ತಪ್ಪು ಮಾಡಿದಾಗ ಶಿಕ್ಷೆ ನೀಡಿ ಸರಿಯಾದ ದಾರಿಯಲ್ಲಿ ನಡೆಸಲಾಗುತ್ತದೆ.<br>❖ ಮಲ್ಲಿಗೆ ಮೊಗ್ಗುಗಳಂತಿದ್ದ ಮಕ್ಕಳ ಮನಸ್ಸು ಸಾಮಾಜೀಕರಣದಿಂದಾಗಿ ಅರಳುತ್ತದೆ ಹಾಗೂ ಪ್ರಫುಲ್ಲವಾಗುತ್ತದೆ. |
| 51 | ❖ ಕರ್ನಾಟಕದ ಭೂ ಬಳಕೆಯ ಮಾದರಿಗಳು.<br>❖ ನಿವ್ವಳ ಸಾಗುವಳಿ ಭೂಮಿ<br>❖ ಅರಣ್ಯ ಪ್ರದೇಶ<br>❖ ಸಾಗುವಳಿಗೆ ಲಭ್ಯವಿಲ್ಲದ ಭೂಮಿ<br>❖ ಸಾಗುವಳಿ ಮಾಡದ ಇತರೆ ಭೂಮಿ<br>❖ ಬೀಳು ಭೂಮಿ | ❖ ಕಬ್ಬಿಣದಅದಿರು<br>❖ ಚಿನ್ನ<br>❖ ಮ್ಯಾಂಗನೀಸ್<br>❖ ಸುಣ್ಣಕಲ್ಲು<br>❖ ತಾಮ್ರ<br>❖ ಬಾಕ್ಸೈಟ್ |
| 52 | ❖ ನೋಟು ಚಲಾವಣೆಯ ಏಕಸ್ವಾಮ್ಯವನ್ನು ಹೊಂದಿದೆ<br>❖ ಸರ್ಕಾರದ ಬ್ಯಾಂಕಾಗಿ ಕಾರ್ಯನಿರ್ವಹಣೆ<br>❖ ಬ್ಯಾಂಕುಗಳ ಬ್ಯಾಂಕಾಗಿ ಕಾರ್ಯ ನಿರ್ವಹಣೆ<br>❖ ರಾಷ್ಟ್ರೀಯ ಸಂದಾಯ ಕಛೇರಿಯಾಗಿ ಕಾರ್ಯ ನಿರ್ವಹಣೆ<br>❖ ಸಾಲದ ನಿಯಂತ್ರಕನಾಗಿ ಕಾರ್ಯ ನಿರ್ವಹಣೆ<br>❖ ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ<br>❖ ಆರ್ಥಿಕ ಅಂಕಿ ಅಂಶಗಳು ಮತ್ತು ಇತರ ಮಾಹಿತಿಗಳನ್ನು ಪ್ರಕಟಿಸುವುದು.<br>❖ ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ<br>❖ ಕೃಷಿಗಾಗಿ ಸೌಲಭ್ಯಗಳನ್ನು ಒದಗಿಸುವುದು. | ❖ ಶ್ರಮದ ದಕ್ಷತೆ : ಶ್ರಮಿಕರ ದಕ್ಷತೆಯನ್ನು ಹೆಚ್ಚಿಸುತ್ತದೆ<br>❖ ಉತ್ಪಾದನೆಯ ಗುಣಮಟ್ಟ : ಉತ್ಪನ್ನದ ಪ್ರಮಾಣವನ್ನು ಹೆಚ್ಚಿಸುವದಲ್ಲದೇ ಉತ್ಪಾದಿತ ಸರಕುಗಳ ಮತ್ತು ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುತ್ತದೆ.<br>❖ ಲಾಭ : ಉತ್ಪನ್ನದ ಪ್ರಮಾಣ ಮತ್ತು ಗುಣಮಟ್ಟದಲ್ಲಿನ ಹೆಚ್ಚಳವು ಹೆಚ್ಚಿನ ಲಾಭವನ್ನು ತಂದು ಕೊಡುತ್ತದೆ<br>❖ ಸರಾಸರಿ ವೆಚ್ಚ : ಶ್ರಮ ವಿಭಜನೆಯಿಂದ ಉತ್ಪಾದಿತ ಸರಕುಗಳ ಸರಾಸರಿ ವೆಚ್ಚ ಕಡಿಮೆಯಾಗುತ್ತಿರುತ್ತದೆ.ಅದು ಅನುಬೋಗಿಗಳ ಕಡಿಮೆ ಬೆಲೆಯಲ್ಲಿ ಸರಕುಗಳನ್ನು ಪಡೆಯುತ್ತಾರೆ<br>❖ ಸಂಶೋಧನೆ ಮತ್ತು ಅಭಿವೃದ್ಧಿ : ಶ್ರಮವಿಭಜನೆಯು ಸಂಶೋಧನೆ ಮತ್ತು ಆವಿಷ್ಕಾರಕ್ಕೆ ಸಹಾಯಕವಾಗಿದೆ.ಇದು ವಿವಿಧ ರೀತಿಯ ನವೀನ ಉತ್ಪನ್ನಗಳ ಉತ್ಪಾದನೆಗೆ ದಾರಿ ಮಾಡಿ ಕೊಡುತ್ತದೆ. |

<table>
<tr><td>53</td><td>❖ ಇದು ವ್ಯವಹಾರ ನಿರ್ವಹಣೆಯ ಎಲ್ಲಾ ಚಟುವಟಿಕೆಗಳಲ್ಲೂ ವ್ಯಾಪಿಸಿರುತ್ತದೆ.<br>❖ ಸಂಸ್ಥೆಯ ಪ್ರತಿಯೊಬ್ಬ ಸದಸ್ಯನು ಕಾರ್ಯ ಮಗ್ನರಾಗಬೇಕಾಗುತ್ತದೆ.<br>ಉದ್ದೇಶಗಳು<br>❖ ಚಟುವಟಿಕೆಗಳ ಸಮರ್ಪಕ ಹೊಂದಾಣಿಕೆ<br>❖ ಚಟುವಟಿಕೆಗಳ ನಿರಂತರತೆ<br>❖ ಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸುವುದು.</td><td>❖ ಹಣಕಾಸು ವ್ಯವಹಾರ ಸಂಸ್ಥೆಗಳಿಗೆ ಜೀವರಕ್ತವಾಗಿದೆ.<br>❖ ಉತ್ಪಾದನೆಯ ಕಾರ್ಯದಲ್ಲಿ ಸರಕು ಮತ್ತು ಸೇವೆಗಳನ್ನು ಪೂರೈಸಲು ಅಗತ್ಯವಾಗಿದೆ.<br>❖ ವ್ಯವಹಾರ ಸಂಸ್ಥೆಗಳನ್ನು ತಮ್ಮ ಗುರಿಯನ್ನು ಸಾಧಿಸಲು ಹಣಕಾಸು ಪ್ರಮುಖ ಪಾತ್ರವಹಿಸುತ್ತದೆ.<br>❖ ಹಣಕಾಸು ವ್ಯವಹಾರ ಸಂಸ್ಥೆಗಳಿಗೆ ನಿಯಂತ್ರಿತ ಮಾರ್ಗದರ್ಶನ ನೀಡುತ್ತದೆ.<br>❖ ಹಣಕಾಸು ವ್ಯವಹಾರ ಸಂಸ್ಥೆಗಳ ಆಧುನೀಕರಣಕ್ಕೆ ಸಹಕಾರಿಯಾಗಿದೆ.<br>❖ ಮಾರುಕಟ್ಟೆ ಸಮೀಕ್ಷೆ ಮತ್ತು ಜಾಹಿರಾತು ಮೊದಲಾದವುಗಳಿಗೆ ಹಣಕಾಸು ಅಗತ್ಯವಾಗಿದೆ.<br>❖ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಹಣಕಾಸು ಅಗತ್ಯವಾಗಿದೆ.<br>❖ ಹಣಕಾಸಿನ ಸ್ಥಿರತೆ ಒಂದು ಸಂಸ್ಥೆಯ ಯೋಗ್ಯತೆಯನ್ನು ಹೆಚ್ಚಿಸುತ್ತದೆ.</td></tr>
<tr><td>54</td><td colspan="2">❖ ರಜಪೂತ ದೊರೆಗಳಾದ ಭೋಜ, ಮುಂಜ, ಢಂಗ ಮೊದಲಾದವರು ಸ್ವತಃ ಕವಿಗಳಾಗಿದ್ದು ಅನೇಕ ಕವಿಗಳಿಗೆ ಆಶ್ರಯ ನೀಡಿದ್ದರು.<br>❖ ಜಯದೇವ–ಗೀತಗೋವಿಂದಾ<br>❖ ಭಾರವಿ–ಕಿರಾತಾರ್ಜುನೀಯ<br>❖ ಭರ್ತೃಹರಿ–ರಾವಣ ವಧಾ<br>❖ ಮಹೇಂದ್ರಪಾಲ–ಕಾವ್ಯ ಮೀಮಾಂಸೆ<br>❖ ರಾಜಶೇಖರ–ಬಾಲ ರಾಮಾಯಣ ಮತ್ತು ಕರ್ಪೂರ ಮಂಜರಿ(ನಾಟಕಗಳು)<br>❖ ಭವಭೂತಿ–ಮಾಲತಿ ಮಾಧವ, ಮಹಾವೀರಚರಿತೆ ಮತ್ತು ಉತ್ತರರಾಮಚರಿತೆ<br>❖ ಕಲ್ಹಣ–ರಾಜ ತರಂಗಿಣಿ<br>❖ ಜಯನಿಕ–ಪೃಥ್ವೀರಾಜ ವಿಜಯ<br>❖ ಹೇಮಚಂದ್ರ– ಕುಮಾರಪಾಲಚರಿತೆ ಮತ್ತು ದೇಶೀನಾಮ ಮಾಲಾ<br>❖ ಚಾಂದ್ ಬರದಾಯಿ–ಪೃಥ್ವೀರಾಜ್ ರಾಸೋ<br>❖ ಬಲ್ಲಾಳ–ಭೋಜ ಪ್ರಬಂಧ<br>❖ ಈ ಕಾಲದಲ್ಲಿ ಗುಜರಾತಿ, ರಾಜಸ್ತಾನಿ, ಹಿಂದಿ ಭಾಷೆಗಳು ಅಭಿವೃದ್ಧಿ ಹೊಂದಿದವು</td></tr>
<tr><td>55</td><td colspan="2">
</td></tr>
</table>